**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಸ್ಪೆಶಲ್ (ಎನ್.ಡಿ.ಪಿ.ಎಸ್.)ಕೇಸ್ ನಂ.08/2021**

**ಪಿಡಬ್ಲ್ಯೂ-12 (ಸಿಡಬ್ಲ್ಯೂ-19)**

ಸಾಕ್ಷಿದಾರರ ಹೆಸರು : ಮಲ್ಲಪ್ಪ ಸತಿಗೌಡರ

ತಂದೆಯ ಹೆಸರು : ಅಪ್ಪಣ್ಣ

ವಯಸ್ಸು : 41 ವರ್ಷ

ಉದ್ಯೋಗ : ಪಿಎಸ್ಐ , ಇಲಕಲ್ ಗ್ರಾಮೀಣ ಪಿಎಸ್.

ವಾಸಸ್ಥಳ : ಇಲಕಲ್, ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 06/07/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು ದಿ: 07.11.2020 ರಿಂದ ದಿ: 25.02.2022 ರವರಗೆ ಚಡಚಣ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದ ಕಡತವನ್ನು ಚಾಸಾ-18 ರವರಿಂದ ದಿ: 05.03.2021 ರಂದು ಪಡೆದುಕೊಂಡು, ಪರಿಶೀಲಿಸಿ, ತನಿಖೆ ಮುಂದುವರೆಸಿರುತ್ತೇನೆ. ದಿ: 12.03.2021 ರಂದು ಅಮಾನತ ಪಡೆಸಿಕೊಂಡಿದ್ದ ಮುದ್ದೇಮಾಲನ್ನು ಇನ್ವೆಂಟರಿ ಮಾಡಿ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯ ಇಂಡಿ, ಇವರ ಮುಂದೆ ಧೃಡಿಕರಿಸುವಂತೆ ಅರ್ಜಿ ನೀಡಿ, ಹಾಜರು ಪಡೆಸಿರುತ್ತೇನೆ. ನ್ಯಾಯಾಧೀಶರ ಮುಂದೆ ಸಲ್ಲಿಸಿದ ಅರ್ಜಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅರ್ಜಿಯನ್ನು ಮತ್ತು ಅನೇಕ್ಷರ-1 & 2 ನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.14 ರಿಂದ ನಿ.ಪಿ.16 ಎಂದು, ನಿ.ಪಿ.14 ಮತ್ತು ನಿ.ಪಿ.16 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಮತ್ತು ನಿ.ಪಿ.16(ಎ) ಎಂದು ಗುರುತಿಸಲಾಯಿತು. ಇನ್ವೆಂಟರಿ ಮಾಡುವ ಸಮಯದಲ್ಲಿ ನ್ಯಾಯಾಧೀಶರ ಮುಂದೆ

ಪಂಚನಾಮೆ ಮಾಡಿ, ಫೋಟೋವನ್ನು ತೆಗೆಸಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.17 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.17(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.18 ಎಂದು, ಪ್ರಮಾಣ ಪತ್ರವನ್ನು ನಿ.ಪಿ.19 ಎಂದು ಗುರುತಿಸಲಾಯಿತು. ಮುದ್ದೆಮಾಲನ್ನು ಮಾದಕ ವಸ್ತು ವಿಲೇವಾರಿ ಸಮಿತಿಗೆ ಕಳುಹಿಸಿಕೊಟ್ಟಿರುತ್ತೇನೆ. ಮಾದರಿಗಾಗಿ ಸಂಗ್ರಹಿಸಿಕೊಂಡಿದ್ದ ಗಸಗಸೆ ತೊಗಟೆಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು:- ಶ್ರೀ. ಕೆ.ಡಿ.ಆರ್., ವಕೀಲರಿಂದ ಆರೋಪಿತರ ಪರ**

3. ಅಪರಾಧ ನಡೆದ ಬಗ್ಗೆ ಯಾವುದೇ ಮಾಹಿತಿ ಬಂದರೆ ಅದನ್ನು ಠಾಣಾ ದಿನಚರಿಯಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ನಿ.ಡಿ.2 ಠಾಣಾ ದಿನಚರಿಯಲ್ಲಿ ಸಂಜೆ 5.00 ಗಂಟೆಯಿಂದ 7.00 ಗಂಟೆಯವರೆಗೆ ಠಾಣೆಯಲ್ಲಿ ಯಾವುದೇ ಅಪರಾಧ ಘಟನೆಗಳು ವರದಿ ಆಗಿರುವುದಿಲ್ಲ ಎಂದು ನಮೂದಿಸಿರುತ್ತೇವೆ ಎಂದರೆ ಸರಿ. ನಿ.ಡಿ.2 ರಲ್ಲಿ ಕಂಡು ಬರುವಂತೆ ದಿ: 02.03.2018 ರಂದು ಸಂಜೆ 7.45 ರಿಂದ ರಾತ್ರಿ 8.05 ರವರೆಗೆ ಚಾಸಾ-1 ರವರು ಠಾಣಾಧಿಕಾರಿ ಆಗಿದ್ದರು ಎಂದರೆ ಸರಿ.

4. ನಮ್ಮ ಠಾಣೆಯಿಂದ ಘಟನೆ ನಡೆದ ಸ್ಥಳಕ್ಕೆ ಅಂದಾಜು 15 ಕಿ.ಮೀ. ದೂರ ಇದೆ. ನಾವು ಮೂರು ವರ್ಷಗಳ ನಂತರ ಇನ್ವೆಂಟರಿ ಮಾಡಿಸಿರುತ್ತೇವೆ ಎಂದರೆ ಸರಿ. ಆ

ಸಮಯದಲ್ಲಿ ಮುದ್ದೆಮಾಲು ನಮ್ಮ ಠಾಣಾ ಮಾಲುಖಾನಾ ಕೊಠಡಿಯಲ್ಲಿ ಇತ್ತು. ಚಾಸಾ-1ರವರ ಮೇಲೆ ಕೊಲೆ ಆರೋಪ ಇದೆ ಮತ್ತು ಅವರು ಸೇವೆಯಿಂದ ಅಮಾನತಗೊಂಡಿರುತ್ತಾರೆ ಎಂದರೆ ಸರಿ. ನಾನು ಅಮಾನತ ಪಡೆಸಿಕೊಂಡ ಮುದ್ದೆಮಾಲನ್ನು ನ್ಯಾಯಾಧೀಶರ ಮುಂದೆ ಹಾಜರು ಪಡೆಸಿ, ಯಾವುದೇ ಇನ್ವೇಂಟರಿಜ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:-ಇಲ್ಲ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.